**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-105/2023**

ಪಿ.ಡಬ್ಲ್ಯೂಃ- 2

ಸಿ.ಡಬ್ಲ್ಯೂಃ- 2

| | | |
|---|---|---|
| ಸಾಕ್ಷಿದಾರರ ಹೆಸರುಃ | : | ತಿಮ್ಮಯ್ಯ |
| ತಂದೆಯ ಹೆಸರುಃ | : | ಲೇಟ್ ದಾಸಯ್ಯ |
| ವಯಸ್ಸುಃ | : | 69 ವರ್ಷ |
| ವೃತ್ತಿಃ | : | ಪ್ಲಂಬರ್ ಕೆಲಸ |
| ವಾಸಃ | : | ರಾಮನಗರ. |

**ದಿನಾಂಕಃ 30-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ-1 ರಿಂದ 5 ರವರು ನನಗೆ ಗೊತ್ತು. ಚಾಸಾ-1 ಉಷಾರಾಣಿ ನನ್ನ ಮಗಳು. ನನ್ನ ಮಗಳು ಉಷಾರಾಣಿ ರವರ ವಿವಾಹವನ್ನು ನನ್ನ ತಂಗಿ ಯಶೋದ ರವರ ಮಗನಾದ ಜಯಪ್ರಸಾದ್ ರವರೊಂದಿಗೆ 2009 ರಲ್ಲಿ ಅರಸೀಕೆರೆಯ ಗುರುಸಿದ್ದರಾಮೇಶ್ವರ ಸಮುದಾಯಭವನದಲ್ಲಿ ನೆರವೇರಿಸಿರುತ್ತೇನೆ. ವಿವಾಹ ಪೂರ್ವದಲ್ಲಿ ವಿವಾಹದ ಖರ್ಚಿಗಾಗಿ ನಾನು ಒಂದು ಲಕ್ಷದ ಐವತ್ತು ಸಾವಿರ ರೂ. ಹಣವನ್ನು ನನ್ನ ತಂಗಿ ಯಶೋದ ಅಂದರೆ 3ನೇ ಆರೋಪಿತೆಗೆ ನೀಡಿರುತ್ತೇನೆ. 65 ರಿಂದ 70 ಗ್ರಾಂ ಚಿನ್ನದ ಒಡವೆಗಳನ್ನು ನನ್ನ ಮಗಳಿಗೆ ನೀಡಿರುತ್ತೇನೆ.

ವಿವಾಹದ ಸಮಸ್ತ ವೆಚ್ಚವನ್ನೂ ಸಹ ನಾನೇ ಭರಿಸಿರುತ್ತೇನೆ. ವಿವಾಹವಾದ ನಂತರ ನನ್ನ ಮಗಳಾದ ಉಷಾರಾಣಿ ರವರು ಅರಸೀಕೆರೆಯ ತನ್ನ ಗಂಡನ ಮನೆಯಲ್ಲಿ ಸಂಸಾರ ಪ್ರಾರಂಭಿಸಿರುತ್ತಾಳೆ. ವಿವಾಹವಾದ ಸ್ವಲ್ಪ ದಿನಗಳ ನಂತರ ಆರೋಪಿಗಳು ನನ್ನ ಮಗಳಿಗೆ ನನ್ನಿಂದ ಹೆಚ್ಚಿನ ವರದಕ್ಷಿಣೆ ಹಣ ಪಡೆದು ಬರುವಂತೆ ಕಿರುಕುಳ ನೀಡಿರುತ್ತಾರೆ. ಆರೋಪಿಗಳು ಆಕೆಗೆ ಕಿರುಕುಳ ನೀಡುತ್ತಿರುವ ಬಗ್ಗೆ ನನ್ನ ಮಗಳಾದ ಉಷಾರಾಣಿ ನನಗೆ ತಿಳಿಸಿರುತ್ತಾಳೆ. 2ನೇ ಆರೋಪಿ ಭೈರಪ್ಪ ಹಾಗೂ 5ನೇ ಆರೋಪಿ ಧರಣೇಶ ನನ್ನ ಮಗಳು ಉಷಾರಾಣಿಗೆ ಚಪ್ಪಲಿಯಿಂದ ಹೊಡೆದಿರುತ್ತಾರೆ. ನಂತರ ನಾನು ರಾಮನಗರದ ನನ್ನ ಮನೆಗೆ ನನ್ನ ಮಗಳಾದ ಉಷಾರಾಣಿಯನ್ನು ಕರೆದುಕೊಂಡು ಬಂದಿರುತ್ತೇನೆ. ನನ್ನ ಮಗಳು ಗಂಡನ ಮನೆಯಲ್ಲಿದ್ದರೆ ಆರೋಪಿಗಳು ಆಕೆಗೆ ಏನಾದರೂ ಮಾಡಬಹುದು ಎಂದು ಹೆದರಿದ ನಾನು ನನ್ನ ಮಗಳನ್ನು ನನ್ನ ಮನೆಗೆ ಕರೆತಂದಿರುತ್ತೇನೆ.

2. ನನ್ನ ಮಗಳು ಉಷಾರಾಣಿ ಹಾಗೂ 1ನೇ ಆರೋಪಿ ಜಯಪ್ರಸಾದ್ ಸಂಬಂಧದಿಂದ ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ. 3ನೇ ಆರೋಪಿ ಯಶೋದ ರವರು ಆಕೆಯ ಮಗನಾದ 1ನೇ ಆರೋಪಿ ಜಯಪ್ರಸಾದ್ ಗೆ ಹಣ ನೀಡಿ ನೀನು ಮದ್ಯಪಾನ ಮಾಡಿ ಬಂದು ನಿನ್ನ ಹೆಂಡತಿಗೆ ಹೊಡೆದು ಆಕೆಗೆ ಕಿರುಕುಳ ನೀಡಿ ಮನೆಯಿಂದ ಓಡಿಸು ನಾನು ನಿನಗೆ ಇನ್ನೊಂದು ವಿವಾಹ ಮಾಡುತ್ತೇನೆಂದು ಹೇಳಿರುತ್ತಾರೆ. 4ನೇ ಆರೋಪಿ ಶಶಿಧರ ನಮಗೆ ಫೋನ್ ಮಾಡಿ 1ನೇ ಆರೋಪಿ ಜಯಪ್ರಸಾದ್ ಗೆ ತಾವು ಇನ್ನೊಂದು ಮದುವೆ ಮಾಡಿರುವುದಾಗಿ ತಿಳಿಸಿರುತ್ತಾನೆ. ಈ ಬಗ್ಗೆ ನಾವು ಆರೋಪಿಗಳನ್ನು ಕೇಳಲು ಹೋದಾಗ ಅವರು ನಮಗೆ ಬೈದು ಹೊಡೆದಿರುತ್ತಾರೆ. ನಂತರ ನನ್ನ ಮಗಳು ಆರೋಪಿಗಳ

ವಿರುದ್ಧ ಪೊಲೀಸರಲ್ಲಿ ದೂರು ದಾಖಲ್ಮಾಡಿರುತ್ತಾಳೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನಿಪಿ-10 ರಿಂದ 15 1ನೇ ಆರೋಪಿ ಜಯಪ್ರಸಾದ್ ಹಾಗೂ ನನ್ನ ಮಗಳಾದ ಉಷಾರಾಣಿ ರವರ ವಿವಾಹ ಕಾಲದಲ್ಲಿ ತೆಗೆಯಲಾದ ಫೋಟೋಗಳು ಆಗಿರುತ್ತವೆ. ನಿಪಿ-9 ಸದರಿ ವಿವಾಹದ ಆಹ್ವಾನ ಪತ್ರಿಕೆ ಆಗಿರುತ್ತದೆ.

**ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಹೆಚ್ ಜಿ ವಕೀಲರಿಂದಃ**

3. ವಿವಾಹ ಆದ ಒಂದು ವರ್ಷದವರೆಗೆ ಮಾತ್ರ ಆರೋಪಿಗಳು ನನ್ನ ಮಗಳನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ನಾನು 3ನೇ ಆರೋಪಿ ಯಶೋದ ರವರಿಗೆ ಒಂದು ಲಕ್ಷದ ಐವತ್ತು ಸಾವಿರ ರೂ. ಹಣವನ್ನು ವಿವಾಹದ ಖರ್ಚಿಗೆ ನೀಡಿರುತ್ತೇನೆ ಎನ್ನುವ ಬಗ್ಗೆ ಪೊಲೀಸರಿಗೆ ಯಾವುದೇ ದಾಖಲಾತಿ ನೀಡಿರುವುದಿಲ್ಲ. ನನ್ನ ಮಗಳಿಗೆ ವಿವಾಹ ಕಾಲದಲ್ಲಿ ಚಿನ್ನದ ಆಭರಣಗಳನ್ನು ನೀಡಿರುತ್ತೇನೆ ಎನ್ನುವ ಬಗ್ಗೆ ಸಹ ಯಾವುದೇ ದಾಖಲೆಗಳನ್ನು ಸಹ ಪೊಲೀಸರಿಗೆ ನೀಡಿರುವುದಿಲ್ಲ. ಈ ಪ್ರಕರಣವನ್ನು ಹೊರತುಪಡಿಸಿ 1ನೇ ಆರೋಪಿತ ನನ್ನ ಮಗಳಿಗೆ ಕಿರುಕುಳ ನೀಡಿರುತ್ತಾನೆ ಎನ್ನುವ ಬಗ್ಗೆ ಬೇರೆ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ. ಅರಸೀಕೆರೆಯಿಂದ ರಾಮನಗರ ಸುಮಾರು 215 ಕಿ ಮೀ ದೂರದಲ್ಲಿದೆ. ಸುಮಾರು 5-6 ಗಂಟೆಯ ಪ್ರಯಾಣ ಅರಸೀಕೆರೆಯಿಂದ ರಾಮನಗರಕ್ಕೆ ಅರಸೀಕೆರೆಯಿಂದ ರಾಮನಗರಕ್ಕೆ ನೇರವಾದ ಬಸ್ ಸಂಪರ್ಕ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮಗಳನ್ನು ಅರಸೀಕೆರೆಯಿಂದ ರಾಮನಗರಕ್ಕೆ ಕರೆತರುವ ಮೊದಲು ನಮ್ಮ ಮಗಳು ನಮ್ಮ ಮನೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು

ಅರಸೀಕೆರೆಯಿಂದ ರಾಮನಗರದ ನನ್ನ ಮನೆಗೆ ದಿಃ06.08.2022 ರಲ್ಲಿ ಬಂದಿರುತ್ತಾಳೆ. ನನ್ನ ಮಗಳು ರಾಮನಗರದ ನಮ್ಮ ಮನೆಗೆ ಬಂದ ನಂತರ ಅಂದಿನಿಂದಲೂ ಇಲ್ಲಿಯವರೆಗೆ ನನ್ನ ಜೊತೆಯಲ್ಲಿಯೇ ವಾಸ ಎಂದರೆ ಸರಿ. ಪೊಲೀಸರು ನನ್ನನ್ನು ದಿಃ08.05.2022 ರಂದು ವಿಚಾರಣೆ ಮಾಡಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯಲ್ಲಿ ಏನು ಬರೆದುಕೊಂಡಿರುತ್ತಾರೆಂದು ನನಗೆ ತಿಳಿದಿಲ್ಲ. 1ನೇ ಆರೋಪಿ ಜಯಪ್ರಸಾದ್ ಹಾಗೂ ನನ್ನ ಮಗಳು ಉಷಾರಾಣಿ ಅನ್ಯೋನವಾಗಿ ಸಂಸಾರ ನಡೆಸಿದ್ದು 1ನೇ ಆರೋಪಿತ ನನ್ನ ಮಗಳಿಗೆ ಯಾವುದೇ ಕಿರುಕುಳ ನೀಡಿರುವುದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಜಯಪ್ರಸಾದ್ ನನ್ನ ಮಗಳನ್ನು ವಿವಾಹ ಆದ ಕಾಲದಲ್ಲಿ ಆತ ಕುಷ್ಟರೋಗ ಆಸ್ಪತ್ರೆಯಲ್ಲಿ ಕೆಲಸದಲ್ಲಿ ಇದ್ದ ಎಂದರೆ ಸರಿ. 1ನೇ ಆರೋಪಿ ಜಯಪ್ರಸಾದ್ ಈಗ ಯಾವುದೇ ಕೆಲಸ ಮಾಡುತ್ತಿಲ್ಲ ಎಂದರೆ ಸರಿ. 1ನೇ ಆರೋಪಿ ಜಯಪ್ರಸಾದ್ ಗೆ ಕೆಲಸ ಇರುವುದಿಲ್ಲ ಎನ್ನುವ ಕಾರಣದಿಂದ ಆತ ನನ್ನ ಮಗಳಿಗೆ ಯಾವುದೇ ಕಿರುಕುಳ ನೀಡದಿದ್ದರೂ ಸಹ ನನ್ನ ಮಗಳು 1ನೇ ಆರೋಪಿಯನ್ನು ಬಿಟ್ಟು ನಮ್ಮ ಮನೆಗೆ ಬಂದು 1ನೇ ಆರೋಪಿತನ ವಿರುದ್ಧ ಸುಳ್ಳು ಕೇಸನ್ನು ದಾಖಲ್ಮಾಡಿರುತ್ತಾಳೆಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ರಿಂದ 5ನೇ ಆರೋಪಿ ಪರ ವಕೀಲರಿಂದಃ**

4. ನಾನು ಪ್ಲಂಬರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು 7-8 ವರ್ಷಗಳಿಂದ ಪ್ಲಂಬರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಯಾವುದೇ ಜಮೀನು ಇರುವುದಿಲ್ಲ. ನನಗೆ ಒಟ್ಟು 3 ಜನ ಮಕ್ಕಳು. ನನ್ನ ಮಗಳಾದ ಉಷಾರಾಣಿಯ ವಿದ್ಯಾಭ್ಯಾಸವನ್ನು ನನಗೆ ಆರ್ಥಿಕ ತೊಂದರೆ ಇದ್ದ ಕಾರಣದಿಂದ ನಾನು ನಿಲ್ಲಿಸಿರುತ್ತೇನೆ. 3ನೇ ಆರೋಪಿ ಯಶೋದ ನನ್ನ

ಸ್ವಂತ ತಂಗಿ ಎಂದರೆ ಸರಿ. ನನ್ನ ಆರ್ಥಿಕ ಸಂಕಷ್ಟವನ್ನು ನೋಡಿದ ನನ್ನ ತಂಗಿ ಯಶೋದ ರವರು ನನ್ನ ಮಗಳಿಗೆ ವಡವೆ ಹಾಕಿ ಆಕೆಯ ಖರ್ಚಿನಿಂದಲೇ ನನ್ನ ಮಗಳನ್ನು 1ನೇ ಆರೋಪಿ ಜಯಪ್ರಸಾದ್ ಗೆ ವಿವಾಹ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. 2ನೇ ಆರೋಪಿ ಭೈರಪ್ಪ ಸರ್ಕಾರಿ ಕಚೇರಿಯಲ್ಲಿ ಜೀಪ್ ಡ್ರೈವರ್ ಆಗಿದ್ದರು. 2ನೇ ಆರೋಪಿ ತನ್ನ ಸಂಬಳವನ್ನು ಉಳಿತಾಯ ಮಾಡಿ ಒಂದು ಮನೆ ನಿರ್ಮಿಸಿರುತ್ತಾರೆಂದರೆ ಸರಿ. ಆ ಮನೆಯಲ್ಲಿಯೇ ನನ್ನ ಮಗಳು ಹಾಗೂ ಅಳಿಯನಾದ ಜಯಪ್ರಸಾದ್ ವಾಸವಾಗಿದ್ದರು ಎಂದರೆ ಸರಿ. ಸದರಿ ಮನೆಯ ಖರ್ಚನ್ನು 2ನೇ ಆರೋಪಿ ಭೈರಪ್ಪನವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಮಗಳು ಹಾಗೂ 3ನೇ ಆರೋಪಿ ಯಶೋದ ರವರ ಹೊಂದಾಣಿಕೆ ಆಗದ ಕಾರಣ 2ನೇ ಆರೋಪಿ ಭೈರಪ್ಪ ರವರು 7 ವರ್ಷದ ಹಿಂದೆ ನನ್ನ ಮಗಳು ಹಾಗೂ ಅಳಿಯನಿಗೆ ಬೇರೆ ಮನೆ ಮಾಡಿ ಕಳುಹಿಸಿರುತ್ತಾರೆಂದರೆ ಸರಿ. ಅಂದಿನಿಂದ ನನ್ನ ಅಳಿಯ ಹಾಗೂ ಮಗಳೊಂದಿಗೆ ಉಳಿದ ಆರೋಪಿಗಳ ಒಡನಾಟ ಇರುವುದಿಲ್ಲ ಎಂದರೆ ಸರಿ. ನಾನು 3ನೇ ಆರೋಪಿಗೆ ವಿವಾಹದ ಖರ್ಚಿಗೆ 1,50,000/- ರೂ. ಹಣವನ್ನು ನೀಡುವ ಚೈತನ್ಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಆರೋಪಿಗಳು ನನ್ನ ಮಗಳಿಗೆ ಚಪ್ಪಲಿಯಲ್ಲಿ ಹೊಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಮನೆ ಬಿಡಿಸಿಕೊಡುವಂತೆ ಹೇಳಿ ನಾನು 2ನೇ ಆರೋಪಿ ಭೈರಪ್ಪ ರವರ ಮನೆಯ ಬಳಿ ಹೋಗಿ ಜಗಳ ಮಾಡಿರುತ್ತೇನೆಂದರೆ ಸರಿಯಲ್ಲ. 2ನೇ ಆರೋಪಿತ ತನ್ನ ಸ್ವಂತ ಹಣದಿಂದ ನಿರ್ಮಿಸಿರುವ ಮನೆಯನ್ನು ನನ್ನ ಮಗಳಿಗೆ ಬಿಟ್ಟುಕೊಡುವುದಿಲ್ಲ ಎಂದು ಹೇಳಿದ ಕಾರಣದಿಂದ ನಾನು ಆರೋಪಿ-2 ರಿಂದ 5 ರವರ ವಿರುದ್ಧ ಸುಳ್ಳು ಪ್ರಕರಣವನ್ನು

ದಾಖಲ್ಮಾಡಿಸಿರುತ್ತೇನೆಂದರೆ ಸರಿಯಲ್ಲ. ನನ್ನ ಮಗಳ ಇಬ್ಬರು ಮಕ್ಕಳ ಪೈಕಿ ಒಬ್ಬ ಮಗಳನ್ನು 2ನೇ ಆರೋಪಿ ಭೈರಪ್ಪ ಹಾಗೂ 3ನೇ ಆರೋಪಿ ಯಶೋದ ರವರು ನೋಡಿಕೊಳ್ಳುತ್ತಿದ್ದಾರೆಂದರೆ ಸರಿ. ಆರೋಪಿಗಳು ನನ್ನ ಮಗಳಿಗೆ ಯಾವುದೇ ವರದಕ್ಷಿಣೆ ಕಿರುಕುಳ ನೀಡದಿದ್ದರೂ ಸಹ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.